# ಹಿರಿಯ ಶ್ರೇಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ
# ಗೌರಿಬಿದನೂರು

**ಸಿ.ಸಿ. ಸಂಖ್ಯೆ . 182/2020**

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ರಘು | ಸಿ.ಡಬ್ಲ್ಯು | : | 02 |
| ತಂದೆ / ಗಂಡನ ಹೆಸರು | : | ಹನುಮಂತಪ್ಪ | ಪಿ.ಡಬ್ಲ್ಯು | : | 02 |
| ವಯಸ್ಸು | : | 27 ವರ್ಷ | ಪ್ರಮಾಣೀಕರಿಸಿದ ದಿನಾಂಕ | : | 06.08.2026 |
| ವೃತ್ತಿ | : | ವ್ಯವಸಾಯ | | | |
| ವಾಸಸ್ಥಳ | : | ಎಂ. ನಾಗೇನಹಳ್ಳಿ | | | |

ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ

ಚಾಸಾ 1 ನನ್ನ ದೊಡಪ್ಪ, ಚಾಸಾ 3 ನನ್ನ ತಂದೆ, ಚಾಸಾ 4 ನನ್ನ ಅಣ್ಣ, ಚಾಸಾ 5,6 ಮತ್ತು 8 ರಿಂದ 10 ನಮ್ಮ ಊರಿನವರು, ಚಾಸಾ 7 ನಮ್ಮ ಪಕ್ಕದ ಊರಿನವರು. ಆರೋಪಿತರು ಎಲ್ಲರು ನಮ್ಮ ಊರಿನವರು.

ದಿ: 18.04.2020 ರಂದು ಸಂಜೆ 06.00 ಗಂಟೆ ಸಮಯದಲ್ಲಿ ಚಾಸಾ 8 ಮತ್ತು 1 ನೇ ಆರೋಪಿಯ ದಾರಿಯಲ್ಲಿ ಕುರಿ ಮೇಯಿಸಿಕೊಂಡು ಹೋಗುವಾಗ ಚಾಸಾ 1 ರವರು ಕುರಿಗಳನ್ನು ಪಕ್ಕಕ್ಕೆ ಹೊಡೆದುಕೊಳ್ಳಿ ಎಂದು ಹೇಳಿದಕ್ಕೆ 1 ನೇ ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಾನು ಯಾಕೆ ಈ ರೀತಿ ಬೈಯುತ್ತೀರಿ ಎಂದು ಕೇಳಿದಕ್ಕೆ ಸದರಿ ರವರು ಕೈಗಳಿಂದ ಮತ್ತು ಕೋಲಿನಿಂದ ನನಗೆ ಹೊಡೆದಿರುತ್ತಾರೆ.

ದಿ: 19.04.2020 ರಂದು ಬೆಳಗ್ಗೆ 06.30 ಕ್ಕೆ ನಾನು, ಜಗದೀಶ್, ರವಿ,ನನ್ನ ತಂದೆ ಹನುಮಂತಪ್ಪ ಮತ್ತು ಅಶ್ವತಪ್ಪ ರವರು ಟಮೋಟೊ ಕೀಳು ಜಮೀನಿಗೆ ಹೋಗುತ್ತಿದ್ದಾಗ ನಮ್ಮ ಊರಿನವರೆ ಆದ ಅಶ್ವತಪ್ಪ ನಾರಾಯಣಸ್ವಾಮಿ, ಸುಬ್ಬರಾಯಪ್ಪ, ಬೀರಪ್ಪ, ಕೃಷ್ಣಪ್ಪ, ಶ್ರೀನಿವಾಸ್, ಕಿರಣ್, ವಿಜಯ ಕುಮಾರ್, ಉಜ್ಜಿನಪ್ಪ, ಗಂಗಾಧರ, ಮಂಜುನಾಥ್, ಪುನಿತ್, ಯಶ್ವಂತ್, ರಾಘವೇಂದ್ರ, ಬಾಲಕೃಷ್ಣ ಮತ್ತು

ನವೀನ್ ಕುಮಾರ್ ರವರೆಲ್ಲರು ಸೇರಿ ಗುಂಪು ಕಟ್ಟಿಕೊಂಡು ಬಂದು ನಮಗೆ ಹೊಡೆದಿರುತ್ತಾರೆ.

ಗಲಾಟೆ ಆದ ನಂತರ ನಾವು ಗೌರಿಬಿದನೂರು ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿರುತ್ತೇವೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ಕಲ್ಲು, 4 ದೊಣ್ಣೆಗಳು, 2 ಕೋಲುಗಳು, 2 ಕಬ್ಬಿಣದ ಕುಡುಕೋಲುಗಳನ್ನು ನೋಡಿ ಗುರುತಿಸಿ, ಅವುಗಳಿಂದ ನಮ್ಮನ್ನು ಆರೋಪಿತರು ಹೊಡೆದುದಾಗಿ ನುಡಿದಿರುತ್ತಾರೆ. ಆದ್ದುದರಿಂದ ಸದರಿ ಕಲ್ಲು ದೊಣ್ಣೆ ಕೋಲು ಮತ್ತು ಕುಡುಕೋಲುಗಳನ್ನು, ಮು. ಮಾ 1 ರಿಂದ 9 ಎಂದು ಗುರುತಿಸಲಾಯಿತು.

ನಾನು ಈ ಗಲಾಟೆ ವಿಚಾರವಾಗಿ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ ಬಿ.ಎಲ್ ವಕೀಲರಿಂದಃ</u>

ಚಾಸಾ 1 ಅಶ್ವತಪ್ಪ ರವರು ತಮಗೆ ಸೇರಿದ ಕುರಿಗಳನ್ನು ಹೊಡೆದುಕೊಂಡು ಹೋಗುತ್ತಿದ್ದರು. ಅವರು ಕುರಿ ಮೇಯಿಸಿಕೊಂಡು ಬರುತಿದ್ದುದನ್ನು ನಾನು ನೋಡಿದ್ದೇನೆ. ಆ ಸಮಯದಲ್ಲಿ ನಾನು ಅವರಿಂದ ಸುಮಾರು 10 ಮೀಟರ್ ದೂರದಲ್ಲಿದ್ದೆ. ಅವರು ಕುರಿ ಹೊಡದು ಕೊಂಡು ಬರುತ್ತಿದ್ದ ಜಾಗ ರಸ್ತೆ ಯಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಹಳ್ಳಿಯ ಜನ ಕುರಿಗಳನ್ನು ಹೊಡೆದುಕೊಂಡು ಬರುತ್ತಿರುತ್ತಾರೆಂದರೆ ಸರಿ.

ದಿ: 19.04.2020 ರಂದು ನಾವು ಸ.ನಂ. 42/1 ರಲ್ಲಿ ಟಮೋಟೊ ಕೀಳುತ್ತಿದ್ದವು. ನಾನು ಹೇಳಿದಂತೆ 1 ನೇ ಆರೋಪಿಯು ನನಗೆ ಕೆಟ್ಟ ಮಾತುಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ್ ನಲ್ಲಿ ನಾವು ಟಮೋಟೊ ಬೆಳೆಯನ್ನು ಬೆಳದಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪತರು ಯಾರು ಸಹ ಜಮೀನಿಗೆ ಬಂದು ನಮಗೆ ಹೊಡೆದಿಲ್ಲ ಎಂದರೆ ಸರಿಯಲ್ಲ.

ನಿಮ್ಮ ಊರಿನಲ್ಲಿ ಆರೋಪಿತರೆ ಬೇರೆ ರಾಜಕೀಯ ಪಕ್ಷಕ್ಕೆ ಸೇರಿದವರು, ನೀವು ಬೇರೆ ರಾಜಕೀಯ ಪಕ್ಷಕ್ಕೆ ಸೇರಿದವರು ಎಂದರೆ ಸಾಕ್ಷಿಯು ನಮಗೆ ರಾಜಕೀಯ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ನಮಗೆ ಬೈದು ಗಲಾಟೆ ಮಾಡಿಲ್ಲ

ಹೊಡೆದಿಲ್ಲ ಎಂದರೆ ಸರಿಯಲ್ಲ. ಮು.ಮಾ ಗಳು ಸಾಮಾನ್ಯವಾಗಿ ಊರಿನಲ್ಲಿ ದೊರೆಯುತ್ತವೆಂದರೆ ಸರಿ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

ಓದಿ ಹೇಳಿ ಕೇಳಿ ಸರಿ ಇದೆ

Sd/-
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಗೌರಿಬಿದನೂರು.